ಟಿ.ಎಂ. ರಮೇಶ

ಕಲೆ: ಮುರಳೀಧರ ರಾಠೋಡ್

# ಮತ್ತೆ ತೆರೆಯದ ಬದುಕ ಪರದೆ

**1**

ಫೆಬ್ರುವರಿ 29, 2015 – 'ಗಾನಮಂಚ' ರಂಗದ ಝಗಮಗ ಬೆಳಕಲ್ಲಿ ಬಿಡುಗಣ್ಣರಾಗಿ ನೋಡುತ್ತಿದ್ದ ವೀಕ್ಷಕವೃಂದಕ್ಕೆ ಸಂಭ್ರಮದ ದಿನವಾಗಿತ್ತು.

ಮರುದಿನ ಮಂಜುಕವಿದ ಬೆಳಗು. ದಿನಪತ್ರಿಕೆ ತೆರೆಯುತ್ತಿದ್ದಂತೆ ಕನ್ನಡಿಗರಿಗೊಂದು ಬೆರಗು.

ಹಲವಾರು ವರ್ಷ ಸೆರೆಮನೆಯಲ್ಲಿದ್ದು ಬಿಡುಗಡೆಗೊಂಡು ಹೊರಬಂದ ಕೊಲೆಗಾರನೊಬ್ಬ ಕನ್ನಡ ಚಾನೆಲ್ಲೊಂದು ನಡೆಸಿದ ಅಖಿಲ ಕರ್ನಾಟಕ ಗಾಯನ ಸ್ಪರ್ಧೆಯಲ್ಲಿ ಮೊದಲ ಬಹುಮಾನವಾದ ಹತ್ತುಲಕ್ಷವನ್ನ ಗೆದ್ದಿದ್ದ. ಆತನನ್ನ ಹುಡುಕಿಕೊಂಡು ಬಂದ ಪತ್ರಕರ್ತರ ದಂಡು ಆತ ಚಾನೆಲ್ ಬಿಲ್ಡಿಂಗ್‌ನಿಂದ ಹೊರಬರುವುದನ್ನೇ ಕಾಯುತ್ತಿತ್ತು. ಏಕೆಂದರೆ, ಅವನಿಗೆ ಕಾಯಂ ವಿಳಾಸವಿರಲಿಲ್ಲ.

'ಮೊದಲಿಗೆ ನಿಮಗೆ ಅಭಿನಂದನೆಗಳು. ಮೊದಲ ಬಹುಮಾನ ಪಡೆದದ್ದಕ್ಕೆ ಸಂತೋಷವಾಗುತ್ತಿದೆಯಾ?'

'ಸಹಜವಾಗಿ' ಆತ ಉತ್ತರಿಸಿದ.

'ಆ ಹಣವನ್ನ ಏನು ಮಾಡಬೇಕೆಂದಿದ್ದೀರಿ?'

'ಅವರ ಮುಂದಿನ ಬದುಕಿಗೇ ಬೇಕಲ್ಲ' ಮತ್ತೊಬ್ಬ ಪತ್ರಕರ್ತನೇ ಉತ್ತರಿಸಿದ.

'ನಿಮ್ಮ ಗೆಲುವಿಗೆ ಶ್ರೋತೃಗಳ ಮೆಸೇಜೇ ಕಾರಣ, ನಿಮಗಿಂತಲೂ ಚನ್ನಾಗಿ ಹಾಡಿದವರಿದ್ದರು. ಆದರೆ, ಶ್ರೋತೃಗಳ ಮತಗಳೇ ನಿರ್ಣಾಯಕವಾಗಿ ನೀವು ಗೆದ್ದಿರಿ ಅಂತ ಹೇಳ್ತಾರೆ, ನಿಜಾನಾ?'

'ನಿರ್ಣಾಯಕರನ್ನ ಕೇಳಿ, ನನಗೆ ಗೊತ್ತಿಲ್ಲ' ಆತ ನಿರಂಬಳವಾಗಿ ಉತ್ತರಿಸಿದ.

'ನಿರೂಪಕಿ ಮತ್ತೆ ಮತ್ತೆ ನಿಮ್ಮ ಬದುಕಿನ ದುರಂತಕತೆಯನ್ನ ಹೇಳಿದ್ದೆ ಶ್ರೋತೃಗಳು ನಿಮ್ಮ ಪರವಾಗಿ ಮೃದು ಹೃದಯದವರಾಗಿ ಮತ ಹಾಕುವುದಕ್ಕೆ ಕಾರಣ ಅನ್ನುತ್ತಾರಲ್ಲ, ನಿಜಾನಾ?'

ಅವನಿಗೆ ಉತ್ತರಿಸಬೇಕೆನ್ನಿಸಲಿಲ್ಲ ಅಥವಾ ಏನು ಉತ್ತರ ಕೊಡಬೇಕೊ ತೋಚಲಿಲ್ಲ. ಮತ್ತೊಬ್ಬ ಪತ್ರಕರ್ತ ದನಿಗೂಡಿಸಿದ, 'ನೀವು ಒಂದು ಕೊಲೆ ಮಾಡಿ ಜೈಲಿಗೆ ಹೋದವರಂತೆ, ಅಪರಾಧ ಸಾಬೀತಾಗಿ ಜೀವಾವಧಿ ಶಿಕ್ಷೆಯೂ ಆಗಿತ್ತಂತೆ. ಸನ್ನಡತೆಯ ಮೇಲೆ ಬೇಗನೆ ಬಿಡುಗಡೆ ಹೊಂದಿದವರಂತೆ. ಅದೇನೇ ಇದ್ದರೂ ಪ್ರಾಮಾಣಿಕವಾಗಿ ಹೇಳಿ, ನೀವು ಈ ಕೊಲೆ ಮಾಡಿದ್ದು ನಿಜವಾ? ಕಾರಣ ಕೇಳಬಹುದಾ?'